ಧ್ವನಿ ಭಾವಪೂರ್ಣವಿದೆ, 'ರಾಜೀವನೂ ಇವುಗಳ ಜತೆಯಲ್ಲೇ ಆಡಿದ್ದಾನೆ. ಈಗ ಅವನ ಮಗನಿಗೆ ಇದನ್ನು ಕೊಡು'.

'ಮೃತ್ಯಕಟಿಕ... ಅಲ್ಲ ರಜತ ಶಕಟಗಳು...' ಅಮ್ಮ ಖುಷಿಯಿಂದ ನಕ್ಕರು. ದಮಯಂತಿ, ಅವರು ಯಾವಾಗಲೂ ಪೂರ್ಣ ಹೆಸರುಗೊಂಡೇ ಕರೆಯುವರು. ಕಳೆದುಹೋದೆ? ಸಂತೋಷವಷ್ಟೆ... ಇನ್ನು ತಿಜೋರಿ ಮುಚ್ಚು. ಅವರೆಲ್ಲ ಬರುವ ಹೊತ್ತಾದೀತು'.

'ನೀವೂ ಬನ್ನಿ ಹೊರಗೆ' ಅಮ್ಮ ಹೇಳಿ ನಡೆದರು; ಅವರಿಗಾಗಿ ಹೊರಳಿ ನೋಡಿದರೆ ಕೋಣೆ ಬರಿದಾಗಿದೆ!

***

ಆರೂವರೆಗೆ ಕಾರು ಬಂದು ನಿಂತು, ಅಂಗಳವಿಡೀ ಗಡಿಬಿಡಿಯೆದ್ದು ಪರಿಮಳದಂತೆ ಸಂಭ್ರಮದ ಕಂಪು ಹರಡಿತು.

'ಅಜ್ಜಿ ನೋಡಲ್ಲಿ...' ರಾಜೀವ ಮಗನನ್ನಿವರ ಹೆಂಡತಿಯೊಂದಿಗೆ ಕಾಲಿಗೆ ನಮಸ್ಕರಿಸಿದಾಗ ಹಿಗ್ಗಿ ಹೂವಾಗಿ ಮೋಹಿತನ ಗುಲಾಬಿ ಕೆನ್ನೆಗಳಿಗೆ ಮುದ್ದಿಸುತ್ತ 'ದೀರ್ಘಾಯುಷ್ಮಾನ್ ಭವ' ಹರಸಿದರು. ಸೊಸೆ ಕೆಂಪು ಕೆಂಪಾಗಿ ಚಿಮ್ಮುವ ಆರೋಗ್ಯದೊಂದಿಗೆ ಅರಳಿದ್ದರೆ ಮಗ ಇಳಿದು ಹೋಗಿರುವಂತೆ ಭಾಸವಾದದ್ದು ನಿಜವೋ ಸುಳ್ಳೋ...? ಇದ್ದಂತಿಲ್ಲ, ಮಗನೂ ಚೆನ್ನಾಗಿಯೇ ಇದ್ದಾನೆ. ಮೊಮ್ಮಗುವಂತೂ ಪಾದರಸದ ಚಿಲುಮೆ. 'ಏನು ಮಾತಾಡಬೇಕು? ಹೇಗೆ? ಇಂಗ್ಲಿಷೋ?'

'ಇಲ್ಲ ಅಮ್ಮ ನಮ್ಮ ಜೊತೆ ಅವನು ನಮ್ಮ ಮಾತೇ ಆಡುತ್ತಾನೆ, ನೀನು ಕೇಳಿ ನೋಡು' ಕಾಫಿ ಕುಡಿಯುತ್ತ ಸಂಭಾಷಣೆಗಳ ಕೋಟೆ ಎದ್ದಿತು. ರುಕ್ಕಮ್ಮ, ಚನ್ನಪ್ಪರ ಮುದಿ ಕಣ್ಣುಗಳಲ್ಲೂ ಹರುಷದ ಬಿಸಿಲು ಕೋಲು. ಅರೆಗಳಿಗೆಯಲ್ಲೇ ಅಜ್ಜಿ ಮೊಮ್ಮಗನ ನಡುವೆ ಆತ್ಮೀಯತೆಯ ಸೇತುಬಂಧನವಾಯಿತು. 'ನೋಡಿಲ್ಲಿ ನಿನಗೆ ಯಾವ ಸಿಹಿ ಇಷ್ಟ... ನಾನೇ ತಿನ್ನಿಸುತ್ತೇನೆ ಬಾ' ಆರು ವರ್ಷದ ಉದ್ದ ಕಾಲುಗಳ ಹುಡುಗನನ್ನು ಕಂಕುಳಿಗೆ ಏರಿಸಿ ಒಳ ನಡೆದರು... 'ಅಮ್ಮನ ಸಂಭ್ರಮ ನೋಡಿದೆಯಾ?' ರಾಜೀವನ ಪ್ರಶ್ನೆಗೆ ಶ್ರಾವಣಿಯ ಕಿರುನಗೆ ಉತ್ತರಿಸಿತು.



ಮಿಕ್ಕಿಯನ್ನು ತುಂಬಾ ಇಷ್ಟಪಟ್ಟಿತು ಮಗು. ಅದು ಓಡಿದಲ್ಲಿ ಓಡಿ, ನುಗ್ಗಿದಲ್ಲಿ ನುಗ್ಗಿ ಚೆಂಡು ಹಿಡಿದು ಆಡಿ ಸಖ್ಯ ಬೆಳೆಸಿತು. ಮಿಕ್ಕಿಗೂ ಮೋಹಿತನ ಸಂಗ ಹಿತವಾಯಿತು. ರಾತ್ರಿಯ ಹನ್ನೊಂದಾದರೂ ಮಗನೊಂದಿಗೆ ಮುಗಿಯದ ಮಾತುಗಳು ಅಮ್ಮನವು. ನೂರು ಪ್ರಶ್ನೆಗಳು, ಸಾವಿರ ಕುತೂಹಲಗಳು.

'ಅಮ್ಮ ನಾಳೆ ಜನ ಬರುತ್ತಾರಲ್ಲವೆ? ನಿನಗೂ ಕೆಲಸ ಹೆಚ್ಚಾಗಿ ಕಷ್ಟವಾದೀತು. ಆಯಾಸ ಮಾಡಿಕೊಳ್ಳಬೇಡ. ಇನ್ನು ಮಲಗು ಹೋಗು' ರಾಜೀವ ಒತ್ತಾಯಿಸಿ ಕಳುಹಿಸಿದಾಗಲೆ ದಿಂಬಿಗೆ ತಲೆ ಒರಗಿತು. 'ಇವರಿಗೂ ಸಂತೋಷವಾಗಿರಬಹುದಲ್ಲ ಮಕ್ಕಳನ್ನು ಕಂಡು', ಕೇಳಬೇಕೆನಿಸಿತು. ಎಲ್ಲಿದ್ದಾರೆ? ಅತ್ತಿತ್ತ ನೋಡುತ್ತಲೇ ಕಣ್ಣುಗಳಲ್ಲಿ ನಿದ್ರೆಯಿಳಿಯಿತು.

ಐವತ್ತು ಅರವತ್ತು ಜನ ತುಂಬಿ ಮದುವೆಯ ಮನೆಯ ಕಳೆ ಹೊತ್ತು ಸಂಭ್ರಮಸಂತಸದ ಅಲೆಗಳನ್ನೆಬ್ಬಿಸಿತು ಮನೆ. ರಾಜೀವನ ಭೇಟಿ, ಅವನೊಂದಿಗೆ ಮಾತುಕತೆ ಎಲ್ಲರಿಗೂ ಆಪ್ಯಾಯಮಾನ. ಹಾಗೇ ಇನ್ನೂರು ಮೈಲಿ ದೂರದಿಂದ ತನ್ನ ಸಮಯ ಮಾಡಿಕೊಂಡು ರಾಜೀವನಿಗಾಗಿಯೆ ಬಂದಿದ್ದಾನೆ ಅವನ ಗೆಳೆಯ ಮನೋಹರ. ಮನಶಾಸ್ತ್ರಜ್ಞ ಮನೋಹರ ಎರಡು ಮೂರು ದೊಡ್ಡ ಆಸ್ಪತ್ರೆಗಳಲ್ಲಿ ವಿಸಿಟಿಗೆ ಹೋಗುತ್ತಿದ್ದ.

ಸಂಜೆ ಲಕ್ಷ್ಮೀ ಪೂಜೆ. ಬೆಳ್ಳಿಯ ಬಿಂದಿಗೆಯ ಮೇಲಿಟ್ಟ ತೆಂಗಿನ ಕಾಯಿಕಲಶಕ್ಕೆ ತೊಡಿಸಿದ ಚಿನ್ನವಜ್ರಹವಳದ ಹಾರಗಳ ಹೊಳಪಿಗೆ ಕೋಣೆ ಪ್ರತಿಫಲಿಸಿ ಪ್ರಜ್ವಲಿಸಿತು... ಮಂಡಿಯೆತ್ತರದ ಮಂದಾಸನಗಳಲ್ಲಿ ಐದು ಜತೆ ದೀಪಗಳು ಬೆಳಗಿ ಪುಷ್ಪಗಳ ತೊಟ್ಟಿಲಲ್ಲಿ ಆವಾಹನೆಯಾದ ಲಕ್ಷ್ಮೀ ಪ್ರಸನ್ನಳಾದ ಧನ್ಯತೆ ತುಂಬಿತು ಅಮ್ಮನಲ್ಲಿ, ಗೇಣಗಲದ ಜರತಾರಿ ರೇಷ್ಮೆ ಉಟ್ಟು ಮೈತುಂಬ ಆಭರಣವಿಟ್ಟ ಸೊಸೆ ಫಲ ತಾಂಬೂಲದ ತಟ್ಟೆ ಹಿಡಿದು ಓಡಾಡುವುದನ್ನು ಕಂಡು ಸುಖವೆನಿಸಿತು. ಅವರೂ ನಿಂತಿರುವರಲ್ಲ ಅಲ್ಲಿ, ಕೋಣೆಯ ಬಾಗಿಲಲ್ಲಿ... ಈ ಸಂಭ್ರಮವನ್ನೆಲ್ಲ ಆಸ್ವಾದಿಸುತ್ತಿದ್ದಾರೆ. 'ಹೇಗೆ ನಡೆದಿದೆ?' ಅಮ್ಮ ಒಳಹೋಗಿ ಕೇಳಿದರು.

'ನೀನು ಕೈಗೆತ್ತಿಕೊಂಡ ಕಾರ್ಯ ಅಂದರೆ ಮತ್ತೆ ಹೇಳಬೇಕೆ? ನಿಜಕ್ಕೂ ನನಗೆ ತುಂಬಾ ಸಂತೋಷವಾಗಿದೆ' ಅವರು ಹೇಳಿದರು.

ಮೋಹಿತ ಒಳಗೋಡಿ ಬಂದ. 'ಯಾರಜ್ಜೀ... ಯಾರು. ಯಾರತ್ರ ಮಾತಾಡ್ತೀ...?'

ಅವನ ಹಿಂದೆಯೇ ಬಂದ ಮಿಕ್ಕಿ ಬೌ, ಬೌ ಎಂದು ಬೊಗಳಿ ಬಾಲವಾಡಿಸಿ ಮುಖ ಎತ್ತಿ ಎತ್ತಿ ಕುಂಯಿಗುಟ್ಟಿತು. ಎಗರೆಗರಿ ಕುಣಿಯಿತು.

'ತಾತನ್ನ ನೋಡಿದೆಯಾ ಮರಿ?' ಅಮ್ಮ ಕರೆದೊಯ್ದರು.

'ತಾತ? ಎಲ್ಲಿ ಎಲ್ಲಿ...?' ಮಗು ಕಣ್ಣರಳಿಸಿ ಮತ್ತೆ ಅರೆಕ್ಷಣದಲ್ಲಿ ಚಪ್ಪಾಳೆ ತಟ್ಟಿ ನಕ್ಕಿತು. ಅದರ ತಲೆಯನ್ನು ನೇವರಿಸಿ ಮುದ್ದಿಸಿ ಮೈದಡವಿ ಭಾವುಕರಾಗಿ ಅವರನ್ನು ಕಂಡು ಕಂಠವುಬ್ಬಿತು ಅಮ್ಮನಿಗೆ.

'ತಗೋ ಕಂದ, ಇವುಗಳೊಂದಿಗೆ ಆಟವಾಡು' ಎರಡೂ ಬಂಡಿಗಳನ್ನು ಅವನ ಕೈಗಿತ್ತರು. ಖುಷಿಯಿಂದ ಹೊರಗೋಡಿತು ಮಗು. ಅಪ್ಪನ ಬಳಿ ಬಂದು ನಿಂತು 'ಅಲ್ಲಿ ತಾತ ಇದ್ದಾರೆ ಡ್ಯಾಡಿ... ಅಲ್ಲಿ ಒಳಗೆ...' ಎಂದಿತು. ಹರಟೆ ರಂಗೇರಿದ್ದ ರಾಜೀವನಿಗೆ ಗಮನವಿಲ್ಲ. 'ಆಡಿಕೋ ಹೋಗು ಮರಿ...' ಎಂದು ಮತ್ತೆ ಅತ್ತ ತಿರುಗಿದ.

***

'ಎಷ್ಟು ಬಾರಿ ಕರೆದರೂ ಒಮ್ಮೆ ನನ್ನಲ್ಲಿಗೆ ಬರುವ ಮನಸ್ಸು, ಇಚ್ಛೆ ನಿನಗಾಗುವುದೇ ಇಲ್ಲವೇನಮ್ಮ?' ಅಮ್ಮನ ಕೈ ಬೆರಳುಗಳನ್ನು ತನ್ನದರೊಂದಿಗೆ ಹೆಣೆಯುತ್ತ ಮುನಿಸಿನ ಪ್ರಶ್ನೆಯಿಟ್ಟ ರಾಜೀವ.

'ಹಾಗೇನಿಲ್ಲವಪ್ಪ, ನನ್ನ ಮನಸ್ಸು ನಿನ್ನೊಟ್ಟಿಗೇ ಇರುವುದಂತೂ ನಿಜ'.

'ಮಾತು ತಪ್ಪಿಸಬೇಡ ಅಮ್ಮ. ಈ ಬಾರಿ ನಿನಗೂ ಟಿಕೆಟ್ ಮಾಡಿಸುವುದೇ ಖಂಡಿತ... ಇಲ್ಲ ಅನ್ನಬೇಡ', ಅಮ್ಮನ ಮೌನ ಮುಗುಳ್ನಗೆ ಹೆಚ್ಚಿನ ಅರ್ಥ ಕಲ್ಪಿಸದೆ ಎದ್ದು ಮಲಗಲು ನಡೆದ.

'ನೋಡಿದಿರಾ ಈ ಬಾರಿ ರಾಜೀವ ಎಷ್ಟು ಹಟಕ್ಕೆಳಿದಿದ್ದಾನೆ. ಅವನೊಟ್ಟಿಗೆ ಹೋಗದಿದ್ದರೆ ಇನ್ನು ಕೋಪ ಮಾಡಿಕೊಳ್ಳುತ್ತಾನೆ. ನೀವೇನು ಹೇಳೀರಿ?'

ಮಂಚದ ತುದಿಯಲ್ಲಿ ಕೂತವರಿಗೆ ಅಮ್ಮ ಹೇಳಿದರು. ಅರೆಕ್ಷಣ ತಡೆದ ಅವರು 'ಅದು ನಿನ್ನ ನಿನ್ನ ಮಗನ ನಡುವಿನ ವ್ಯವಹಾರ. ನಾನು ನಡುವೆ ಬರುವವನಲ್ಲ' ಎಂದರು.

'ಹಾಗೆಂದರೆ ಏನು? ಬಿಡಿಸಿ ಹೇಳಿ. ನನಗೆ ಅರ್ಥವಾಗ್ತಿಲ್ಲ. ನಾನು ಹೋಗಲೋ ಬೇಡವೋ?'

'ಹೇಳಿದೆನಲ್ಲ ಅದು ನಿಮ್ಮಿಬ್ಬರಿಗೇ ಬಿಟ್ಟದ್ದು...'

'ಇಲ್ಲ, ಹೀಗೆ ಹೇಳಿ ಕೈ ತೊಳೆದು ಬಿಟ್ಟರೆ ನಿಮಗೆ ಇಷ್ಟವಿಲ್ಲ ಎಂದುಕೊಳ್ಳಲೆ? ಆಯಿತೆ... ಹಾಗಾದರೆ? ಕೈಗಡಿಯಾರ ಮರೆತಿದ್ದ ರಾಜೀವ ಅದೇ ಹೊತ್ತಿಗೆ ಮರಳಿ ಅಮ್ಮನ ಕೋಣೆಗೆ ಬಂದಿದ್ದ. 'ಯಾರಿಗೆ ಏನು ಇಷ್ಟವಿಲ್ಲ ಅಮ್ಮ? ಯಾರೊಂದಿಗೆ ಮಾತನಾಡುತ್ತಿದ್ದಾಳೆ ಅಮ್ಮ?'

'ಅವರು...' ಎನ್ನುತ್ತಿದ್ದ ದಮಯಂತಿ ತಟ್ಟನೆ ಮತ್ತೆ ನಿಲ್ಲಿಸಿ 'ಏನಿಲ್ಲ, ನೀನು ಹೋಗಿ ಮಲಗು ರಾಜು' ಎಂದರು. 'ಅವರನ್ನು' ತೋರಿಸಿ ಹೇಳಿದರೂ ಅವನು ಒಪ್ಪಲಾರ. ಮತ್ತೇನು ಪ್ರಯೋಜನ? ಮಗ್ಗುಲಾಗಿ ಶಾಲನ್ನು ತಲೆಯವರೆಗೂ ಮುಸುಕೆಳೆದು ನಿದ್ರೆ ಮಾಡ್ತೀನಿ ಎನ್ನುವ ಸೂಚನೆಯಿತ್ತರು. ಮಧ್ಯಾಹ್ನ ಮೋಹಿತ ಬಂದು 'ತಾತ ತಾತ' ಎಂದೇನೋ ಹೇಳಿದ್ದ ನೆನಪು ಬಂದಿತು. ಮಗು ತನ್ನನ್ನು ಎಲ್ಲಿಗೆ ಕರೀತಾ ಇದ್ದ? ರಾಜೀವನ ಹಣೆಯಲ್ಲಿ ನೆರಿಗೆಗಳು ಮೂಡಿದುವು.

ಕೋಣೆಯ ಆಚೆ ಚೆನ್ನಪ್ಪ ಎದುರಾದ. 'ಚಿಕ್ಕ ಧಣಿ' ಎಂದು ತಲೆ ತುರಿಸಿದ. 'ಒಂದು ಮಾತು ಧಣಿ'

'ಏನಪ್ಪ?' ಎಂದ.

'ಅದು... ಒಡತಿ ಕೋಣೆಯೊಳಗೆ ಒಬ್ಬರೇ ಮಾತಾಡ್ತಾರೆ... ನಾವು ಕೇಳಿದರೆ ನೋಡು ನಿನ್ನ ಧಣಿ ಬಂದಿದ್ದಾರೆ... ಗುರುತು ಹಿಡಿಯುವುದಿಲ್ಲವೇನು ಎಂದು ಸಿಡಿಮಿಡಿ ಆಗುತ್ತಾರೆ'.